# ದಿ ವಾಲ್

## ಮೇಷ್ಟರಾಗಿಯೂ ಕಮಾಲ್




**ರಾಹುಲ್ ದ್ರಾವಿಡ್ ಮುಖ್ಯ ಕೋಚ್ ಆಗಿ ಭಾರತ ತಂಡಕ್ಕೆ ಹಿಡಿದ ಸಾಣೆ ಎಲ್ಲ ಆಟಗಾರರಿಗೂ ಸ್ಪಷ್ಟವಾಗಿ ತಿಳಿದಿದೆ. 19 ವರ್ಷದೊಳಗಿನವರ ತಂಡವನ್ನು ರೂಪಿಸಿದ ಅನುಭವವನ್ನೇ ಇನ್ನಷ್ಟು ಗಟ್ಟಿ ಮಾಡಿಕೊಂಡಂತೆ ಅವರು ಪಾಠ ಹೇಳಿದರು. ಟ್ವೆಂಟಿ20 ವಿಶ್ವಕಪ್ ಎತ್ತಿಹಿಡಿದ ಭಾರತ ತಂಡದ ಈ ಮೇಷ್ಟರ ಹಳೆಯ ಗಟ್ಟಿ ಇನಿಂಗ್ಸ್‌ಗಳ ನೆನಪೇ ಪುಳಕ ಮೂಡಿಸುತ್ತದೆ.**

**■ ವಿಶಾಖ ಎನ್.**

‘ಅವನು ದೇವರಂತೆ ಆಡಿದ’– ಹೀಗೆ 2003ರಲ್ಲಿ ಹೊಗಳಿದ್ದು ಸೌರವ್ ಗಂಗೂಲಿ. ಹೊಗಳಿಕೆ ಸಂದದ್ದು ರಾಹುಲ್ ದ್ರಾವಿಡ್ ಅವರಿಗೆ.

ಅಡಿಲೇಡ್ ಮೈದಾನದಲ್ಲಿ ನಡೆದ ಟೆಸ್ಟ್ ಕ್ರಿಕೆಟ್ ಪಂದ್ಯವೊಂದರಲ್ಲಿ ರಾಹುಲ್ ದ್ರಾವಿಡ್ ಎರಡು ಇನಿಂಗ್ಸ್‌ಗಳಿಂದ 305 ರನ್ ಸೇರಿಸಿದರು. ಅದಕ್ಕಿಂತ ಮುಖ್ಯವಾಗಿ, ಆ ಇನಿಂಗ್ಸ್‌ಗಳಿಂದ ಅವರು 835 ನಿಮಿಷ ಕ್ರೀಸ್‌ನಲ್ಲಿ ನಿಂತಿದ್ದರು. 20 ವರ್ಷಗಳ ನಂತರ ಭಾರತವು ಆ ನೆಲದಲ್ಲಿ ಟೆಸ್ಟ್ ಪಂದ್ಯ ಗೆಲ್ಲಲು ಮಹತ್ವದ ಕಾಣಿಕೆ ಸಲ್ಲಿಸಿದ ಇನಿಂಗ್ಸ್ ಅದು. ಹಾಗಾಗಿ ‘ದೇವರು’ ಎಂಬ ಸೌರವ್ ಉದ್ಗಾರಕ್ಕೆ ಅರ್ಥವಿತ್ತೆನ್ನಿ.

ಅದಕ್ಕೂ ಎರಡು ವರ್ಷಗಳ ಹಿಂದಿನ ಮಾತು. ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ ಫಾಲೋಆನ್ ಎದುರಾಗಿತ್ತು. ಟೆಸ್ಟ್ ಪಂದ್ಯ ಕೈಬಿಟ್ಟಂತೆಯೇ ಎಂದು ಭಾವಿಸಲಾಗಿತ್ತು. ಕೋಲ್ಕತ್ತದ ಈಡನ್ ಗಾರ್ಡನ್ಸ್ ಮೈದಾನ ಬೇರೆ; ಭಾರತಕ್ಕೆ ಪ್ರತಿಷ್ಠೆಯ ಪ್ರಶ್ನೆ. ಆಸ್ಟ್ರೇಲಿಯನ್ನರು ಅದಾಗಲೇ ಒಂದು ಮಟ್ಟದ ಆತ್ಮವಿಶ್ವಾಸದಲ್ಲಿ ಮುಳುಗಿದ್ದರು. ಒಂದು ತುದಿಯಲ್ಲಿ ರಾಹುಲ್ ದ್ರಾವಿಡ್. ಇನ್ನೊಂದು ತುದಿಯಲ್ಲಿ ವಿವಿಎಸ್ ಲಕ್ಷ್ಮಣ್. ಜುಗಲ್‌ಬಂದಿ. ಲಕ್ಷ್ಮಣ್ ಆಗೀಗ ಆಕ್ರಮಣದ ಆಟ ಆಡುತ್ತಿದ್ದರೆ, ದ್ರಾವಿಡ್ ಕಡಲ ಅಲೆಗಳು ಎಷ್ಟು ಅಪ್ಪಳಿಸಿದ್ದರೂ ಅಲ್ಲಾಡದ ಬಂಡೆಯಂತೆ ನಿಂತರು. ಇಬ್ಬರೂ ಸೇರಿ ಐದನೇ ವಿಕೆಟ್‌ಗೆ 335 ರನ್ ಜಮೆ ಮಾಡಿದರು. ಅಷ್ಟೇ ಅಲ್ಲ, ಆ ಕ್ರಿಕೆಟ್ ಟೆಸ್ಟ್ ಪಂದ್ಯ ಗೆದ್ದುಕೊಟ್ಟರು. ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಆಗ ಫಾಲೋಆನ್ ನಂತರ ಗೆಲುವು ಪಡೆದ ಮೂರನೇ ಪಂದ್ಯ ಅದಾಗಿತ್ತು. ಅಷ್ಟು ಹೊತ್ತಿಗೆ ದ್ರಾವಿಡ್ ಹೆಸರಿನ ಪಕ್ಕ ‘ದಿ ವಾಲ್’ ಎನ್ನುವ ವಿಶೇಷಣ ಅಂಟಿಕೊಂಡಿತ್ತು.

2004. ಈ ಸಲ ರಾವಲ್ಪಿಂಡಿಯ ನೆಲ. ಪಾಕಿಸ್ತಾನದ ವಿರುದ್ಧ ಸರಣಿ ಗೆಲ್ಲುವ ಕನಸು ಮಡುಗಟ್ಟಿದ್ದ ಹೊತ್ತು. ದ್ರಾವಿಡ್ ಒಟ್ಟು ಹನ್ನೆರಡು ತಾಸು ಇಪ್ಪತ್ತು ನಿಮಿಷ ಲಂಗರು ಹಾಕಿ ನಿಂತು ಆಡಿದರು. 34 ಬೌಂಡರಿಗಳು, ಒಂದು ಸಿಕ್ಸರ್‌ನ ಕಾಡುವ ಇನಿಂಗ್ಸ್ ಅದು. ಭಾರತದ ಪರ ಟೆಸ್ಟ್ ಕ್ರಿಕೆಟ್‌ನಲ್ಲೇ ಅತಿ ದೊಡ್ಡ ಮ್ಯಾರಥಾನ್ ಇನಿಂಗ್ಸ್‌ಗಳ ಪಟ್ಟಿಯಲ್ಲಿ ಅದು ಎದ್ದುಕಾಣುತ್ತದೆ. ವೈಯಕ್ತಿಕವಾಗಿ ದ್ರಾವಿಡ್ ಅವರ ಶ್ರೇಷ್ಠ ಗಳಿಕೆಯಾದ 270 ರನ್ ಸೇರಿಸಿದ ಮೇಲೆ ಅವರು ಬೆವರು ಒರೆಸಿಕೊಂಡರು. ಪಂದ್ಯದಲ್ಲಿ ಭಾರತಕ್ಕೆ ಗೆಲುವಿನ ನಗೆ. ರಾಹುಲ್ ದ್ರಾವಿಡ್ ತರಹದ ಪಾಪದ ಬ್ಯಾಟ್ಸ್‌ಮನ್‌ಗೆ ವಿಪರೀತ ಕೆಣಕಿ ಬೌಲಿಂಗ್ ಮಾಡುವುದಕ್ಕೆ ಮನಸ್ಸೇ ಆಗುವುದಿಲ್ಲ ಎಂದು ಆನಂತರ ಪದೇ ಪದೇ ಶೋಯೆಬ್ ಅಖ್ತರ್ ಹೇಳುತ್ತಲೇ ಬಂದಿದ್ದಾರೆ.

2011ರಲ್ಲಿ ಇಂಗ್ಲೆಂಡ್ ಪ್ರವಾಸ ಕೂಡ ಮಜವಾಗಿತ್ತು. ಮೂರು ಟೆಸ್ಟ್ ಪಂದ್ಯಗಳಲ್ಲಿ ರಾಹುಲ್ ದ್ರಾವಿಡ್ ಒಟ್ಟು 446 ರನ್ ಕಲೆಹಾಕಿದರು. ಮೂರು ಶತಕ ಸೇರಿದ್ದ ಸಾಧನೆ ಅದು. ಓವಲ್‌ನಲ್ಲಿ ನಡೆದ ಪಂದ್ಯದಲ್ಲಿ ಇನಿಂಗ್ಸ್ ಆರಂಭಿಸಿದ್ದ ಅವರು ಭಾರತದ ಅಷ್ಟೂ ವಿಕೆಟ್‌ಗಳು ಉರುಳಿದ ನಂತರವೂ ಔಟ್ ಆಗದೆ ಪೆವಿಲಿಯನ್‌ಗೆ ಮರಳಿದ್ದರು.

ಭಾರತವು ಇತ್ತೀಚೆಗೆ ಟ್ವೆಂಟಿ20 ವಿಶ್ವಕಪ್ ಗೆದ್ದ ನಂತರ ತಂಡದ ಮುಖ್ಯ ಕೋಚ್ ಕುರ್ಚಿಯಿಂದ ದ್ರಾವಿಡ್ ಕೆಳಗೆ ಇಳಿದರು. ಆಗ ಅವರ ವ್ಯಕ್ತಿತ್ವದ ಹಲವು ಮುಖಗಳನ್ನು ತೆರೆದಿಡಬಲ್ಲ ಈ ಇನಿಂಗ್ಸ್‌ಗಳು ನೆನಪಾದವು. ಕರ್ನಾಟಕದಲ್ಲಿ ಸ್ಪರ್ಧಾತ್ಮಕ ಕ್ರಿಕೆಟ್ (ವಿಶೇಷವಾಗಿ ರಣಜಿ ಟೂರ್ನಿ) ನೆಲ ಕಚ್ಚಿರುವ ಈ ಹೊತ್ತಿನಲ್ಲಿ ನಮ್ಮದೇ ನಾಡಿನ ಈ ಪ್ರತಿಭಾವಂತ, ಸಮಕಾಲೀನ ಕ್ರಿಕೆಟ್‌ಗೆ ಗುರುವಿನ ರೂಪದಲ್ಲಿ ಕೊಟ್ಟಿರುವ ಕಾವನ್ನು ಸ್ಮರಿಸಲಾದರೂ ಇಲ್ಲಿ ಅವರಿಗೆ ಒಂದು ಪುಟ್ಟ ಸನ್ಮಾನ ಮಾಡಬೇಕಿತ್ತು.

ಟ್ವೆಂಟಿ20 ವಿಶ್ವಕಪ್ ಗೆದ್ದು ಬಂದ ತಂಡದ ಎಲ್ಲರಿಗೂ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಬೋನಸ್ ಪ್ರಕಟಿಸಿತು. ಆದರೆ, ಮುಖ್ಯ ಕೋಚ್ ದ್ರಾವಿಡ್ ತಮ್ಮತ್ತ ಬಂದ ₹5 ಕೋಟಿ ಬೋನಸ್‌ನಲ್ಲಿ ಅರ್ಧದಷ್ಟನ್ನು ನಿರಾಕರಿಸಿದರು. ಬ್ಯಾಟಿಂಗ್ ಕೋಚ್ ವಿಕ್ರಮ್ ರಾಥೋಡ್, ಬೌಲಿಂಗ್ ಕೋಚ್ ಪಾರಸ್ ಮಹಾಂಬ್ರೆ, ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಅವರಿಗೆ ತಲಾ ₹2.5 ಕೋಟಿ ಬೋನಸ್ ಪ್ರಕಟಿಸಲಾಗಿತ್ತು. ಸಂಭಾವನೆ ವಿಷಯದಲ್ಲಿ ತಾವೂ ಅವರಿಗೆ ಸರಿಸಮಾನವಾಗಿ ನಿಲ್ಲಬೇಕೆನ್ನುವ ಕಾರಣಕ್ಕೆ ಅವರು ತೆಗೆದುಕೊಂಡ ಅಪರೂಪದ ನಿರ್ಧಾರ ಇದು.

ಅವರು ಈ ರೀತಿ ಬೋನಸ್ ವಿಷಯದಲ್ಲಿ ನಿರಾಕರಣೆ ತೋರಿದ್ದು ಇದೇ ಮೊದಲೇನೂ ಅಲ್ಲ. 2018ರಲ್ಲಿ ಭಾರತದ 19 ವರ್ಷದೊಳಗಿನವರ ತಂಡ ವಿಶ್ವಕಪ್ ಗೆದ್ದು ಬಂದಾಗಲೂ ಅವರು ಆ ತಂಡದ ಕೋಚ್ ಆಗಿದ್ದರು. ಆಗ ಬಿಸಿಸಿಐ ಅವರಿಗೆ ₹50 ಲಕ್ಷ ಬೋನಸ್ ಪ್ರಕಟಿಸಿತ್ತು. ನೆರವು ನೀಡಿದ ಇತರ ಸಿಬ್ಬಂದಿಗೆ ತಲಾ ₹20 ಲಕ್ಷ ಘೋಷಿಸಿತ್ತು. ಆಗಲೇ ಬೋನಸ್ ಅನ್ನು ಸಮನಾಗಿ ಹಂಚುವಂತೆ ಅವರು ಬಿಸಿಸಿಐಗೆ ಸಲಹೆ ನೀಡಿದ್ದರು. ತಮ್ಮ ಬೋನಸ್ ಮೊತ್ತವನ್ನು ಆಗಲೂ ಕಡಿತಗೊಳಿಸಿಯೇ ಪಡೆದುಕೊಂಡಿದ್ದರು.

ಆಟಗಾರನಾಗಿ ದ್ರಾವಿಡ್ ಪರಮ ಸಂಯಮಿ. ಕೋಚ್ ಆಗಿಯೂ ಅವರು ವಿಪರೀತ ಎನ್ನುವಷ್ಟು ಪ್ರಯೋಗಗಳಿಗೆ ಕೈಹಾಕಲಿಲ್ಲ. ಆಟಗಾರರನ್ನು ಸಹಜ ಶೈಲಿಯಲ್ಲೇ ಬೆಳೆಯಲು ಬಿಟ್ಟು, ಆಗೀಗ ಹಿಡಿದು ಸರಿಪಡಿಸಿದರಷ್ಟೆ. ಈಗ ಫಲಿತಾಂಶ ಎದುರಲ್ಲಿ ಇದೆ. ಏಕದಿನ ವಿಶ್ವಕಪ್‌ನಲ್ಲಿ ಫೈನಲ್‌ವರೆಗೆ ಹೋಗಿದ್ದ ತಂಡವನ್ನು ಬೆಳೆಸಿದ್ದು, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲೂ ಅಂತಿಮ ಘಟ್ಟ ತಲುಪಲು ಇಂಧನವಾಗಿದ್ದು ಅವರ ಸಾಧನೆಗೆ ಕೈಗನ್ನಡಿ.

ಪ್ರತಿಕ್ರಿಯಿಸಿ: feedback@sudha.co.in